ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 24-03–2020

## ಪತ್ರಿಕಾ ಪ್ರಕಟಣೆ

## ಸಚಿವರ ಪ್ರವಾಸ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವರಾದ ಜಗದೀಶ್ ಶೆಟ್ಟರ್ ಅವರು ದಿನಾಂಕ: 24–03–2020ರಂದು ಹುಬ್ಬಳ್ಳಿ ಪ್ರವಾಸ ಕೈಗೊಂಡು ಹುಬ್ಬಳ್ಳಿಯಲ್ಲಿ ವಾಸ್ತವ್ಯ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಉಪ ಸಭಾಧ್ಯಕ್ಷರಾಗಿ ಆನಂದ ಮಾಮನಿ ಅವಿರೋಧ ಆಯ್ಕೆ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ):

ಸವದತ್ತಿ ಕ್ಷೇತ್ರದ ಶಾಸಕ ಆನಂದ ಚಂದ್ರಶೇಖರ ಮಾಮನಿ ಅವರು ಕರ್ನಾಟಕ ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಮಂಗಳವಾರ ಅವಿರೋಧವಾಗಿ ಆಯ್ಕೆಯಾದರು.

## ಕೊವಿಡ್–19 ವಿರುದ್ದ ಹೋರಾಡಲು ಕಾರಾಗೃಹಗಳಲ್ಲಿ ಫೇಸ್‌ಮಾಸ್ಕ್‌ಗಳ ತಯಾರಿ

ಬೆಂಗಳೂರು, ಮಾರ್ಚ್ 24 (ಕರ್ನಾಟಕ ವಾರ್ತೆ): ಕೊರೊನಾ ವೈರಸ್‌ನಿಂದ ಉಂಟಾಗುವ ಪ್ರಸ್ತುತ ಆರೋಗ್ಯ ಬಿಕ್ಕಟ್ಟನ್ನು ಎದುರಿಸಲು ರಾಜ್ಯ ಸರ್ಕಾರಕ್ಕೆ ಸಹಾಯ ಮಾಡಲು ಕರ್ನಾಟಕದ ಎಲ್ಲಾ ಕೇಂದ್ರ ಕಾರಾಗೃಹಗಳು ಫೇಸ್‌ಮಾಸ್ಕ್‌ಗಳನ್ನು ತಯಾರಿಸಲು ಪ್ರಾರಂಭಿಸಿವೆ. ರಾಜ್ಯಾದ್ಯಂತ 08 ಕೇಂದ್ರ ಕಾರಾಗೃಹಗಳಲ್ಲಿ 5000 ಫೇಸ್‌ಮಾಸ್ಕ್‌ಗಳನ್ನು ಪ್ರತಿ ದಿನ ಉತ್ಪಾದಿಸಲಾಗುತ್ತಿದೆ.

ಬೆಂಗಳೂರು ಕೇಂದ್ರ ಕಾರಾಗೃಹವೊಂದರಲ್ಲಿಯೇ 2000 ಫೇಸ್‌ಮಾಸ್ಕ್‌ಗಳನ್ನು ತಯಾರಿಸಲಾಗುತ್ತಿದೆ. ಬೆಂಗಳೂರಿನಲ್ಲಿ ರಾಜ್ಯ ಪೊಲೀಸ್ ಪ್ರಧಾನ ಕಛೇರಿ, ಪೊಲೀಸ್ ಆಯುಕ್ತರ

ಕಛೇರಿ, ನಗರ ಸಶಸ್ತ್ರ ಮೀಸಲು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಗಳಿಗೆ ಸುಮಾರು 17,000 ಫೇಸ್‌ಮಾಸ್ಕ್‌ಗಳನ್ನು ಸರಬರಾಜು ಮಾಡಲಾಗುತ್ತಿದೆ. ಈ ಫೇಸ್‌ಮಾಸ್ಕ್‌ಗಳನ್ನು ಉತ್ಪಾದನಾ ವೆಚ್ಚ ರೂ. 6/- ರಲ್ಲಿ ಸರಬರಾಜು ಮಾಡಲಾಗುತ್ತಿದೆ.

ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಕೊರೊನಾ ವೈರಸ್ ಸೋಂಕು ಹರಡುವುದನ್ನು ತಡೆಗಟ್ಟಲು ಹಾಗೂ ಪರೀಕ್ಷಿಸಲು ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಹೊಸದಾಗಿ ಪ್ರವೇಶ ಪಡೆದ ಬಂದಿಗಳನ್ನು ಸಾಮಾನ್ಯ ಬ್ಯಾರಾಕ್‌ಗಳಿಗೆ ಸ್ಥಳಾಂತರಿಸುವ ಮೊದಲು ಸಂಪೂರ್ಣವಾಗಿ ಪರೀಕ್ಷಿಸಿ ಮತ್ತು ಪತ್ಯೇಕ ಬ್ಯಾರಾಕ್‌ಗಳಲ್ಲಿ ಇರಿಸಲಾಗುತ್ತಿದೆ. ಸೋಂಕನ್ನು ತಡೆಗಟ್ಟಲು ಎಲ್ಲಾ ಕಾರಾಗೃಹಗಳ ಒಳಗೆ Isolation Wards ಗಳನ್ನು ತೆರೆಯಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಯಾವುದೇ ಹೊರಗಿನ ವ್ಯಕ್ತಿಗಳೊಂದಿಗೆ ಬಂದಿಗಳಿಗೆ ಮುಖಾಮುಖಿ ಸಂಪರ್ಕವನ್ನು ಮತ್ತು ಸಂದರ್ಶನವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಬಂದಿಗಳಿಗೆ ತಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಂಪರ್ಕಿಸಲು ದೂರವಾಣಿ ಸೌಲಭ್ಯ ನೀಡಲಾಗಿದೆ.

ಬಂದಿಗಳನ್ನು ಗೌ॥ ನ್ಯಾಯಾಲಯಗಳಿಗೆ ವಿಡೀಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಗುತ್ತಿದೆ. ಕಾರಾಗೃಹದ ಆವರಣದ ಸ್ವಚ್ಚತೆಗೆ, ಬಂದಿಗಳ ಮತ್ತು ಸಿಬ್ಬಂದಿಗಳ ವೈಯಕ್ತಿಕ ನೈರ್ಮಲ್ಯಕ್ಕೆ ವಿಶೇಷ ಒತ್ತನ್ನು ನೀಡಲಾಗುತ್ತಿದೆ. ಕೊರೊನಾ ವೈರಸ್ ಸೋಂಕನ್ನು ತಡೆಗಟ್ಟಲು ಬಂದಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಅರಿವಿನ ಕಾರ್ಯಕ್ರಮಗಳನ್ನು ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

## Prisons in Karnataka, manufacture facemasks to fight COVID-19 virus

Bangalore, March 24 (Karnataka Information) : All the central prisons in Karnataka have started manufacturing facemasks to help the state government in dealing with the present health crisis arising out of corona virus. A total of around 5000 face masks are being produced daily in 8 central prisons across the state out of which 2000 face masks alone are being manufactured at the Bangalore Central Prison. In Bangalore, about 17,000 face masks are being supplied to the State Police Headquarters, Police Commissioners office, City Armed Reserve, BWSSB etc. These masks are being supplied at the manufacturing cost which is about Rs.6/-.

There are a large number of other measures also which are being taken to check and prevent spread of corona virus in various prisons in the state. Newly admitted prisoners are thoroughly checked and kept in separate barracks before being shifted to regular barracks. Isolation wards have been created inside all the prisons as a preventive measure. Visitors to the prisoners have been stopped to ensure that there is

no face to face contact to the prisoners with any outside person as a precautionary measure. Prisoners are being given the facility to talk to their family and friends through Phones.

All the court appearances of the prisoners are through video conferencing. Special emphasis has been given on the cleanliness of the prison premises and personal hygiene of the prisoners and prison staff. Awareness programmes and preventive measures are being taken to educate both prisoners as well as the prison staff said by Press

## ಕೊರೊನಾ ನಿಯಂತ್ರಣಕ್ಕಾಗಿ ಸರ್ಕಾರದ ನಿರ್ದೇಶನ ಪಾಲಿಸಲು ಸಾರ್ವಜನಿಕರಿಗೆ– ಗೋವಿಂದ ಕಾರಜೋಳ ಮನವಿ

ಬೆಂಗಳೂರು. ಮಾ.24 : ಕೊರೊನಾ ವೈರಸ್ ನಿಯಂತ್ರಣಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತವು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಿಮಿತವಾಗಿ ಶ್ರಮಿಸುತ್ತಿದ್ದು, ಸರ್ಕಾರದ ನಿರ್ದೇಶನಗಳನ್ನು ಸಾರ್ವಜನಿಕರು ಕಡ್ಡಾಯವಾಗಿ ಪಾಲಿಸಿ, ತಮ್ಮ, ತಮ್ಮ ಕುಟುಂಬ ಹಾಗೂ ಸಮಾಜದ ಆರೋಗ್ಯ ಸಂರಕ್ಷಣೆಗೆ ಕಂಕಣ ಬದ್ದರಾಗಬೇಕು ಎಂದು ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳ ಅವರು ಮನವಿ ಮಾಡಿದ್ದಾರೆ.

ಸಾರ್ವಜನಿಕರು ಹೆಚ್ಚು ಜಾಗೃತರಾಗಿರಬೇಕು. ಕೆಮ್ಮು, ಜ್ವರ ನೆಗಡಿ ಕಂಡು ಬಂದರೆ ಕೂಡಲೇ ಸ್ವಯಂ ಪ್ರೇರಣೆಯಿಂದ ಆಸ್ಪತ್ರೆಗೆ ತೆರಳಿ, ಆರೋಗ್ಯ ತಪಾಸಣೆಗೆ ಒಳಗಾಗಿ, ವೈದ್ಯರ ಸಲಹೆಗಳನ್ನು ಪಾಲಿಸಬೇಕು. ಸೋಂಕಿತರು ಇತರರಿಗೆ ಸೋಂಕು ಹರಡದಂತೆ ಎಚ್ಚರವಹಿಸಬೇಕು. ಇಂತಹ ಪ್ರಕರಣಗಳು ಕಂಡು ಬಂದ ಕೂಡಲೇ ಸ್ಥಳೀಯ ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಮಾಹಿತಿ ನೀಡಬೇಕು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಆರೋಗ್ಯ ಇಲಾಖೆ ಹಾಗೂ ಜಿಲ್ಲಾಡಳಿತ ಕಾಲ ಕಾಲಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಿವೆ. ಈ ನಿರ್ದೇಶನಗಳು, ಸೂಚನಗಳನ್ನು ಸ್ವಯಂ ಪ್ರೇರಣೆಯಿಂದ ಪಾಲಿಸಬೇಕು. ಸಾರ್ವಜನಿಕರು ಯಾರೂ ಒಂದಡೆ ಸೇರಬಾರದು. ಇಂತಹ ಸಂದರ್ಭಗಳು ಎದುರಾದರೂ ನಿಲ್ಲಿಸಬೇಕು. ಸಂಚಾರ, ವಿಮಾನ, ರೈಲು ಕಾರ್ಯಚರಣೆ ಸ್ಥಗಿತಗೊಳಿಸಿದೆ.

ಸರ್ಕಾರವು ಮಾರ್ಚ್ 31 ರವರೆಗೆ 144 ಸೆಕ್ಷನ್ ಜಾರಿಯಲ್ಲಿದೆ. ಆದರೂ ಕೆಲವು ಪ್ರದೇಶದಲ್ಲಿ ಜನ ಸಂದಣಿ ಸೇರಿದ್ದನ್ನು ಕಂಡಿದ್ದೇವೆ. ಸಾರ್ವಜನಿಕರು ತಮ್ಮ ಆರೋಗ್ಯ, ತಮ್ಮ ಕುಟುಂಬದ ಹಾಗೂ ಸಮಾಜ ಆರೋಗ್ಯ ಸಂರಕ್ಷಣೆಗಾಗಿ ಸಹಕರಿಸಿ, ಸರ್ಕಾರದ ನಿರ್ದೇಶನಗಳನ್ನು ಪಾಲಿಸಬೇಕು. ತಮ್ಮ ಹಾಗೂ ಕುಟುಂಬದ ಆರೋಗ್ಯ ಸುರಕ್ಷತೆಗಾಗಿ ತಮ್ಮ ಮನೆಯಲ್ಲೇ ಇರಬೇಕು ಎಂದು ಅವರು ಮನವಿ ಮಾಡಿದ್ದಾರೆ.

## ಯುಗಾದಿ ಹಬ್ಬವನ್ನು ಸರಳವಾಗಿ ಆಚರಿಸಲು –ಗೋವಿಂದ ಎಂ ಕಾರಜೋಳ ಮನವಿ

ಬೆಂಗಳೂರು. ಮಾ. 24 : ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಸಾರ್ವಜನಿಕರು ಯುಗಾದಿ ಹಬ್ಬವನ್ನು ಸರಳವಾಗಿ ಆಚರಿಸುವಂತೆ ಉಪಮುಖ್ಯಮಂತ್ರಿಗಳಾದ ಗೋವಿಂದ ಎಂ ಕಾರಜೋಳ ಅವರು ಮನವಿ ಮಾಡಿದ್ದಾರೆ.

ಸಾರ್ವಜನಿಕರು ತಮ್ಮ ಮನೆಯಲ್ಲಿ ಇದ್ದು, ಕುಟುಂಬಕ್ಕೆ ಸೀಮಿತವಾಗಿ ಯುಗಾದಿ ಹಬ್ಬವನ್ನು ಆಚರಿಸುವ ಮೂಲಕ ಕೊರೊನಾ ವೈರಸ್ ನಿಯಂತ್ರಣಕ್ಕೆ ಸಹಕರಿಬೇಕು ಎಂದು ಡಿಸಿಎಂ ಮನವಿ ಮಾಡಿದ್ದಾರೆ.

ನಾಡಿನ ಸಮಸ್ತ ಜನತೆಗೆ ಯುಗಾದಿ ಹಬ್ಬದ ಶುಭಾಷಯಗಳು. ನೂತನ ಸಂವತ್ಸರವು ಎಲ್ಲರ ಬಾಳಿನಲ್ಲಿ ಸುಖ, ಶಾಂತಿ, ಸಮೃದ್ಧಿಯನ್ನು ತರಲಿ. ಹೊಸ ಚೈತನ್ಯ, ಹೊಸತನ ಮೂಡಿಸಲಿ. ಹೊಸ ವರ್ಷವು ಉತ್ತಮ ಮಳೆ, ಬೆಳೆ, ಸಂಪತ್ತು, ಸಮೃದ್ಧಿಯನ್ನು ತರಲಿ ಎಂದು ಡಿಸಿಎಂ ಆಶಯ ವ್ಯಕ್ತಪಡಿಸಿದ್ದಾರೆ.

## PORTFOLIOS RE-ALLOCATED FOR B SREERAMULU AND DR K SUDHAKAR

BENGALURU, MARCH 24 ( KARNATAKA INFORMATION ) :

On the advice of the Chief Minister Mr B S Yediyurappa, he Governor of Karnataka Mr Vaju Bhai Vala has re-allocated the portfolios for Mr B Sreeramulu and Dr K Sudhakar.

The Minister for Health and Family Welfare Mr B Sreeramulu has been allocated the portfolio of Backward Classes, in addition to his portfolio of Health and Family Welfare.

The Minister for Medical Education Dr K Sudhakar has been allocated all matters relating to COVID-19, in addition to his portfolio of Medical Education, according to a Raj Bhavan Communiqué.

**********

D P M

**COVID-19 : HAM RADIO ESTABLISHES A CONTROL ROOM**

**AT WAR ROOM**

<u>BENGALURU, MARCH 24 ( KARNATAKA INFORMATION ) :</u>

The Indian Institute of Hams has a established a Control Room for its Ham Radio Station at the Chief Minister's War Room on COVID-19, which is established at the Second Floor of Vartha Soudha, the State Head Quarters of the Department of Information and Public Relations in Bengaluru.

According to the Director of the Indian Institute of Hams Dr S Sathyapal, Ham Radio is a second line of communication during disasters. The Ham Network has the facility to collect information with internet facility and even without internet facility from every nook and corner of the State and pass on this information to the Government and flash through its network the authentic information received from Government to communicate to the people.

***********

D P M

**OFFICERS AND STAFF OF KARNATAKA POLICE HOUSING CORPORATION TO CONTRIBUTE ONE DAY SALARY TO CHIEF MINISTER'S RELIEF FUND TO COMBAT COVID-19**

BENGALURU, MARCH 24 ( KARNATAKA INFORMATION ) :

The officers and staff of the Karnataka State Police Housing and Infrastructure Development Corporation Limited have decided to contribute one day salary to the Chief Minister's Relief Fund to strengthen the efforts of Government to combat COVID-19, according to its Chairman and Managing Director R P Sharma.

************

D P M